KACM010017932023

Presented on : 03-08-2023
Registered on : 03-08-2023

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**Presided Over by RAJESHWARI N. HEGDE**
**Com.O.S./95/2023**

Plaintiff:
M/s Prasad Traders, Rep. By its Prop. Sri. B.S. Raghavendra Prasad.
Age: 45
Address: M/s Prasad Traders, Rep. By its Prop. Sri. B.S. Raghavendra Prasad S/o B.L. Srinivas, 45yrs. APMC Yard, Kadur Town. Kadur Tq. Ckm.

VERSUS

Defendant:
1. Smt. Radha. W/o Late. Krishna, 45yrs. Flour Mill, R/o S.M. Krishna Extn. Doddapattanagere Road, Kadur Town. Ckm.
2:Kum. Roopa.D/o Late. Krishna, 21yrs. R/o S.M. Krishna Extn. Doddapattanagere Road, Kadur Town. Ckm.
3:Kum. Ranjitha.D/o Late. Krishna, 19yrs. R/o S.M. Krishna Extn. Doddapattanagere Road, Kadur Town. Ckm

------------------------------------------------------------------------------------------

Advocate for Plaintiff: K.H.Mallikarjuna
Advocate for Defendants: K.N. CHANDRASHEKAR

---

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರಃ ಶ್ರೀ ಕೆ ಎನ್ ಸಿ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ 1 ನೇ ಪ್ರತಿವಾದಿಯಾಗಿರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಗಾಗಿ ನನ್ನ ಅಫಿಡವಿಟ್‌ನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿದೆ. ಅದರಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಯಿಸಿ, ಸಹಿ ಮಾಡಿದ್ದೇನೆ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು,

ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
(ರಾಜೇಶ್ವರಿ ಎನ್ ಹೆಗಡ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರಃ ಶ್ರೀ ಕೆ ಎನ್ ಸಿ ವಕೀಲರಿಂದಃ**

2. ವಾಣಿಜ್ಯ ತೆರಿಗೆ ಅಧಿಕಾರಿ ದಿನಾಂಕಃ 17-02-2024 ರಂದು ಮಾಹಿತಿ ಹಕ್ಕು ಅಧಿನಿಯಮದಡಿ ಕೊಟ್ಟ ಹಿಂಬರಹವನ್ನು ನಿ.ಡಿ. 1 ಎಂದು ಗುರುತಿಸಲಾಯಿತು.

3. ಸಾರ್ವಜನಿಕ ಮಾಹಿತಿ ಅಧಿಕಾರಿಯು ದಿನಾಂಕಃ 12-02-2024 ರಂದು ಕೊಟ್ಟ ಹಿಂಬರವನ್ನು ನಿ.ಡಿ. 2 ಎಂದು ಗುರುತಿಸಲಾಯಿತು.

4. ಸಾರ್ವಜನಿಕ ಮಾಹಿತಿ ಅಧಿಕಾರಿಯು ದಿನಾಂಕಃ 30-01-2024 ರಂದು ಕೊಟ್ಟ ಹಿಂಬರವನ್ನು ನಿ.ಡಿ. 3 ಎಂದು ಗುರುತಿಸಲಾಯಿತು.

5. ದಿನಾಂಕಃ 17-08-2021 ರಂದು ಕೊಟ್ಟ ಜವಾಬು ನೋಟೀಸನ್ನು ನಿ.ಡಿ. 4 ಎಂದು ಗುರುತಿಸಲಾಯಿತು.

6. ಕೃಷ್ಣರವರ ಮರಣ ಪ್ರಮಾಣ ಪತ್ರವನ್ನು ನಿ.ಡಿ. 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ.ಹೆಚ್.ಎಂ. ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
(ರಾಜೇಶ್ವರಿ ಎನ್ ಹೆಗಡ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-
ಜ

ದಿನಾಂಕಃ 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ.ಹೆಚ್.ಎಂ. ವಕೀಲರಿಂದಃ**

7. ಕೃಷ್ಣ ತಂದೆ ಗೋವಿಂದಪ್ಪ,ಎಸ್ ಎಂ ಕೃಷ್ಣ ಬಡಾವಣೆ, ದೊಡ್ಡ ಪಟ್ಟಣಗೆರೆ ರಸ್ತೆ, ಕಡೂರು ನಗರ ಇವರು ನನ್ನ ಯಜಮಾನರು ಎಂದರೆ ಸರಿ. 9448244775 ಮೊಬೈಲ್ ನಂಬರ್ ನನ್ನ ಯಜಮಾನರದ್ದು ಎಂದರೆ ಸರಿ. ನನ್ನ ಯಜಮಾನರು ದ್ವಿತೀಯ ಪಿಯುಸಿ ಓದಿದ್ದರು.

8. ನನ್ನ ಯಜಮಾನರು ಈಗ್ಗೆ ಮೂರುವರೆ ವರ್ಷಗಳ ಹಿಂದೆ ಮೇ ತಿಂಗಳ 10 ನೇ ತಾರೀಖಿನಂದು ತೀರಿಕೊಂಡಿದ್ದಾರೆ. ಅವರು ಮೃತಪಟ್ಟಾಗ ಅವರಿಗೆ 45 ವರ್ಷಗಳಾಗಿತ್ತು.

9. ನನ್ನ ಯಜಮಾನರು ಬದುಕಿದ್ದಾಗ ಮೊದಲಿಗೆ ಹಮಾಲಿ ಕೆಲಸ ಮಾಡುತ್ತಿದ್ದು, ನಂತರದಲ್ಲಿ ಗೊಬ್ಬರದ ವ್ಯಾಪಾರ ಮಾಡುತ್ತಿದ್ದರು. ಹಿಟ್ಟಿನ ಮಿಲ್ ನ್ನು ನನ್ನ ಯಜಮಾನರು ನಡೆಸುತ್ತಿದ್ದರು ಎಂದರೆ ಸರಿಯಲ್ಲ, ಸದರಿ ಮಿಲ್ ನ್ನು ನಾನು ನಡೆಸುತ್ತಿದ್ದೆ. ಸದರಿ ಮಿಲ್ ಕಡೂರಿನ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಇದೆ.

10. ನನ್ನ ಯಜಮಾನರು ಬದುಕಿದ್ದಾಗ ಅಮರ್ ಟ್ರಾನ್ಸ್ ಪೋರ್ಟ್ ಕೊಪ್ಪಳ ಇವರ ರಾಗಿ ಸಬ್ ಏಜೆನ್ಸಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು ರೈತರಿಂದ ನೇರವಾಗಿ ರಾಗಿಯನ್ನು ಅಮರ್ ಟ್ರಾನ್ಸ್ ಪೋರ್ಟ್ ಕೊಪ್ಪಳ ಇವರ ಪರವಾಗಿ ಖರೀದಿಸಿ ಕಳುಹಿಸಿಕೊಡುತ್ತಿದ್ದರು ಎಂದರೆ ಸರಿಯಲ್ಲ.

11. ನನ್ನ ಯಜಮಾನರು ಮೇಲ್ಕಂಡಂತೆ ಖರೀದಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಸಾಗಪೇಟೆ ವೇರ್ ಹೌಸ್ ರವರು ದಾಖಲೆ ಕೊಟ್ಟಿದ್ದಾರೆಂದು ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ತಮಗೆ ಸಂಬಂಧಿಸಿಲ್ಲ ಎಂದು ನಿರಾಕರಿಸಿರುತ್ತಾರೆ.

12. ಕರ್ನಾಟಕ ಬ್ಯಾಂಕ್ ಹಾಗೂ ಎಸ್ ಬಿ ಐ ಶಾಖೆ ಕಡೂರಿನಲ್ಲಿ ನನ್ನ ಯಜಮಾನರಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳು ಇವೆ ಎಂದರೆ ಸರಿ. ಸದರಿ ಎಸ್ ಬಿ ಐ ಬ್ಯಾಂಕ್ ಖಾತೆ ಸಂ.54033401527 ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಖಾತೆ ನಂಬರ್ ಗೊತ್ತಿಲ್ಲವೆಂದು, ಖಾತೆ ಇದೆ ಎಂದು ಹೇಳಿರುತ್ತಾರೆ. ಈಗಲೂ ಸಹಾ ಸದರಿ ಬ್ಯಾಂಕ್ ಖಾತೆ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ.

13. ನಿ.ಪಿ.1.ರ ಚೆಕ್ ಮೇಲೆ ಹೇಳಿದ ಎಸ್ ಬಿ ಐ ಖಾತೆ ನಂಬರ್ ಗೆ ಸಂಬಂಧಿಸಿದ್ದು ನನ್ನ ಯಜಮಾನರಿಗೆ ಸಂಬಂಧಿಸಿದ ಚೆಕ್ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರ ಚೆಕ್ ಮೇಲೆ ಇರುವ ಸಹಿ ನನ್ನ ಯಜಮಾನರದ್ದು ಎಂದರೆ ಸರಿಯಲ್ಲ.

14. ನನ್ನ ಯಜಮಾನರು ದಿನಾಂಕಃ 19-02-2021, 20-02-2021, 22-02-2021 ರಂದು ಖರೀದಿಸಿದ ರಾಗಿ ಬಾಬ್ತು ಹಣವನ್ನು ಪಾವತಿ ಮಾಡಲು ವಾದಿಗೆ ನಿ.ಪಿ.1 ರಂತೆ ಚೆಕ್ ನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

15. ಈ ಕೇಸನ್ನು ಹಾಕುವ ಪೂರ್ವದಲ್ಲಿ ವಾದಿಯಿಂದ ನನಗೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ವಕೀಲರ ಮೂಲಕ reply ನೋಟೀಸ್ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ reply ನೋಟೀಸು ಕೊಡಲು ಮಾಹಿತಿ ಯಾರು ಕೊಟ್ಟರು ಎಂದರೆ ಸಾಕ್ಷಿಯು ತನ್ನ ವಕೀಲರಾದ ಆನಂದ್ ರವರು ಕೊಟ್ಟರು ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ತಕರಾರು ಸಲ್ಲಿಸಲು ಮಾಹಿತಿಯನ್ನು ನಾನೇ

ಕೊಟ್ಟಿರುತ್ತೇನೆ.

16. ನಿ.ಪಿ.8 ಎಂದು ಗುರುತಿಸಲಾದ ನಾನು ವಕೀಲರ ಮೂಲಕ ಕೊಟ್ಟಿರುವ reply ನೋಟೀಸಿನ ಪ್ಯಾರಾ-4 ರಲ್ಲಿ, "ನನ್ನ ಗಂಡ ಗೊಬ್ಬರ ವ್ಯಾಪಾರಿಯಾಗಿದ್ದು, ಆರ್ಥಿಕವಾಗಿ ಸಬಲರಾಗಿರುತ್ತಾರೆ" ಎಂದು ಹೇಳಿದ್ದೇನೆ ಎಂದರೆ ಸರಿ. ಮುಂದುವರಿದು, ಮಲ್ಲೇಶಪ್ಪ ನನ್ನ ಯಜಮಾನರ ಸ್ನೇಹಿತರಾಗಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಮಲ್ಲೇಶಪ್ಪರವರಿಂದ ನನ್ನ ಯಜಮಾನರು ಕೈ ಸಾಲ ಮಾಡಿದ್ದರ ಬಾಬ್ತು ಹಣದ ಭದ್ರತೆಗಾಗಿ ನನ್ನ ಯಜಮಾನರು ಸಹಿ ಮಾಡಿದ 2 ಖಾಲಿ ಚೆಕ್ ಗಳನ್ನು ಕೊಟ್ಟಿದ್ದರು ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ಮಲ್ಲೇಶಪ್ಪರವರು ನನ್ನ ಯಜಮಾನರ ಸಹಿಯನ್ನು ಫೋರ್ಜರಿ ಮಾಡಿ ಖಾಸಗಿ ಫಿರ್ಯಾದನ್ನು ದಾಖಲಿಸಿದ್ದಾರೆಂದು ಬರೆಸಿದ್ದೇನೆ ಎಂದರೆ ಸರಿ. ಮುಂದುವರಿದು, ನನ್ನ ಗಂಡ ಅಕಾಲಿಕ ಮರಣಕ್ಕೆ ತುತ್ತಾಗಿರುತ್ತಾರೆ, ಸದರಿ ಮಲ್ಲೇಶಪ್ಪನವರು ನನ್ನ ಗಂಡ ಬದುಕಿದ್ದಾಗ ರಾಜಿ ಮಾತುಕತೆ ಮಾಡಿಕೊಳ್ಳುವ ಸಮಯದಲ್ಲಿ ಮೇಲ್ಕಂಡ 2 ಚೆಕ್ ಗಳ ಮೇಲೆ ಯಾವುದೇ ರೀತಿ ಕ್ರಮ ಕೈಗೊಳ್ಳುವುದಿಲ್ಲವೆಂದು ದಿನಾಂಕಃ 10-05-2021 ರಂದು ಒಂದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದರು ಎಂದು ಬರೆದಿಸಿದ್ದೇನೆ ಎಂದರೆ ಸರಿ. ಸದರಿ ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಸದರಿ ಒಪ್ಪಿಗೆ ಪತ್ರ ನನ್ನ ಬಳಿಯಲ್ಲಿ ಇಲ್ಲವೆಂದು ತನ್ನ ಯಜಮಾನರು ಒಪ್ಪಿಗೆ ಪತ್ರದ ಬಗ್ಗೆ ತನಗೆ ಮೌಖಿಕವಾಗಿ ಹೇಳಿದ್ದರು ಎಂದು ಹೇಳಿರುತ್ತಾರೆ.

17. ಮೇಲೆ ಹೇಳಿದ ಮಲ್ಲೇಶಪ್ಪ ನನಗೆ ಪರಿಚಯ ಇಲ್ಲ. ಮಲ್ಲೇಶಪ್ಪ ನನ್ನ ಗಂಡನ ಸ್ನೇಹಿತರಾಗಿದ್ದರು ಎಂದು ನನ್ನ ಯಜಮಾನರು ನನಗೆ ಹೇಳಿದ್ದರಿಂದ ಗೊತ್ತು. ಮಲ್ಲೇಶಪ್ಪರವರ ಮಗ ದಿವಾಕರ್ ನನಗೆ ಗೊತ್ತಿಲ್ಲ.

18. ನನ್ನ ಗಂಡ ಬದುಕಿದ್ದಾಗ ಮೇಲ್ಕಂಡ ಮಲ್ಲೇಶಪ್ಪರವರ ಮಗ ದಿವಾಕರ್

ಮತ್ತು ನಾನು, ವೀರಾಂಜನೇಯ ಫರ್ಟಿಲೈಜರ್ಸ್ ಅಂಡ್ ಸಿಮೆಂಟ್ಸ್ ಪ್ರಾರಂಭಿಸಲು ಒಂದು ಕರಾರು ಪತ್ರ ಮಾಡಿಕೊಂಡಿದ್ದೆವು ಎಂದರೆ ಸರಿ. ಸದರಿ ಫರ್ಟಿಲೈಜರ್ಸ್ ಅಂಡ್ ಸಿಮೆಂಟ್ಸ್ ಪ್ರಾರಂಭಿಸಲು ನಾನು ಮತ್ತು ಮಲ್ಲೇಶಪ್ಪರವರ ಮಗ ದಿವಾಕರ್ ಇಬ್ಬರೂ ತಲಾ ರೂ.2,00,000/-ಗಳು ಒಟ್ಟು ರೂ.4,00,000/- ಬಂಡವಾಳ ಹಾಕಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಫರ್ಟಿಲೈಜರ್ಸ್ ಅಂಡ್ ಸಿಮೆಂಟ್ಸ್ ನ್ನು ಸ್ವಲ್ಪ ದಿನಗಳ ಕಾಲ ನಡೆಸಿ, ವಿಸರ್ಜನೆ ಮಾಡಿದೆವು ಎಂದರೆ ಸರಿ. ಸದರಿ ಅಂಗಡಿ ವಿಸರ್ಜನೆ ಆದಾಗ ಮಲ್ಲೇಶಪ್ಪರವರ ಮಗ ದಿವಾಕರ್ ರವರ ರೂ.2,00,000/- ಬಂಡವಾಳದ ಹಣವನ್ನು ಸಹಾ ನಾನೇ ಇಟ್ಟುಕೊಂಡೆನು ಎಂದರೆ ಸರಿಯಲ್ಲ.

19. ಸದರಿ ರೂ.2,00,000/-ಗಳನ್ನು ದಿವಾಕರ್ ರವರು ಮತ್ತು ಮಲ್ಲೇಶಪ್ಪರವರು ವಾಪಾಸ್ ಕೊಡುವಂತೆ ಕೇಳಿದ್ದರೂ ಸಹಾ ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಂತರ ನನ್ನ ಯಜಮಾನರು ಮಲ್ಲೇಶಪ್ಪರವರಿಗೆ ಸದರಿ ರೂ.2,00,000/-ಗಳ ಹಣದ ಬಾಬ್ತು ಕರ್ನಾಟಕ ಬ್ಯಾಂಕಿನ ಚೆಕ್ ನ್ನು ಕೊಟ್ಟರು ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಗದೀಕರಣಕ್ಕೆ ಹಾಜರುಪಡಿಸಿದಾಗ, ಖಾತೆಯಲ್ಲಿ ಹಣವಿಲ್ಲವೆಂದು ವಾಪಾಸ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ಯಜಮಾನರಿಗೆ ಮಲ್ಲೇಶಪ್ಪರವರು ನೋಟೀಸು ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಮಲ್ಲೇಶಪ್ಪರವರು ನನ್ನ ಗಂಡನ ವಿರುದ್ಧ ಈ ಬಗ್ಗೆ ಖಾಸಗಿ ದೂರು ಸಿಸಿ ನಂ.190/2019 ನ್ನು ಕಡೂರು ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ನನ್ನ ಯಜಮಾನರು ತನ್ನ ಪರ ಬಿ.ಎಸ್.ಪ್ರವೀಣ್ ಕುಮಾರ್ ವಕೀಲರನ್ನು ನೇಮಕ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ವಕಾಲತ್ ನಾಮೆಯಲ್ಲಿ ನಮೂದಿಸಿದ ಕೃಷ್ಣ ಬಿನ್ ಗೋವಿಂದಪ್ಪ, ನಜೀರ್ ಸಾಬ್ ಬಡಾವಣೆ, ಕಡೂರು ನನ್ನ ಯಜಮಾನರು ಎಂದರೆ ಸರಿ. ಸದರಿ ವಕಾಲತ್ ನಲ್ಲಿ ಇರುವ ಸಹಿಯನ್ನು ಸಾಕ್ಷಿಗೆ ತೋರಿಸಿ, ಇದು ನಿಮ್ಮ ಯಜಮಾನರ ಸಹಿ ಎಂದು ಕೇಳಲಾಗಿ, ಸಾಕ್ಷಿಯು ತನಗೆ ಹೇಳಲು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನನ್ನ ಯಜಮಾನರ ಸಹಿಯನ್ನು ನಾನು ನೋಡಿದ್ದೇನೆ. ಕಡೂರು ನ್ಯಾಯಾಲಯದಲ್ಲಿ ಸಿಸಿ

ನಂ.190/2019 ರಲ್ಲಿ plea form ನಲ್ಲಿ ಇರುವ ಸಹಿಯನ್ನು ಸಾಕ್ಷಿಗೆ ತೋರಿಸಿ, ಇದು ನಿಮ್ಮ ಯಜಮಾನರ ಸಹಿ ಎಂದು ಕೇಳಲಾಗಿ, ಸಾಕ್ಷಿಯು ತನಗೆ ಹೇಳಲು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

20. ಸದರಿ ಪ್ರಕರಣವನ್ನು ದಿನಾಂಕಃ 08-02-2020 ರಂದು ಲೋಕ್ ಅದಾಲತ್ ನಲ್ಲಿ ತೀರ್ಮಾನ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಮಾನದಂತೆ ನನ್ನ ಯಜಮಾನರು ಸದರಿ ರೂ.2,00,000/-ಗಳನ್ನು 4 ಕಂತುಗಳಲ್ಲಿ ಕೊಡವುದಾಗಿ ಒಪ್ಪಿ ಸಹಿ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಈ ಬಗ್ಗೆ ತನಗೆ ಗೊತ್ತಿಲ್ಲವೆಂದು, ಆದರೆ ಮನೆಯಲ್ಲಿ ಮಲ್ಲೇಶಪ್ಪರವರೊಂದಿಗೆ ವ್ಯವಹಾರ ಇತ್ತು ಎಂದು ನನ್ನ ಯಜಮಾನರು ಹೇಳುತ್ತಿದ್ದರು ಎಂದು ಹೇಳುತ್ತಾರೆ.

21. ಮಲ್ಲೇಶಪ್ಪನಿಗೆ ಎಸ್ ಬಿ ಐ ಬ್ಯಾಂಕಿಗೆ ಸಂಬಂಧಪಟ್ಟ ಚೆಕ್ ನ್ನು ತಾನು ಕೊಟ್ಟಿರುವುದಾಗಿ ನನ್ನ ಯಜಮಾನರು ನನಗೆ ಹೇಳಿದ್ದರು. ಸದರಿ ಚೆಕ್ ಮಲ್ಲೇಶಪ್ಪನ ಬಳಿ ಇದೆ ಎಂಬ ಬಗ್ಗೆ ಲೋಕ್ ಅದಾಲತ್ ನಲ್ಲಿ ಆದ ರಾಜೀ ಅರ್ಜಿ ಯಲ್ಲಿ ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಲ್ಲೇಶಪ್ಪನಿಗೆ ಎಸ್ ಬಿ ಐ ಚೆಕ್ ನ್ನು ಕೊಟ್ಟಿದ್ದರೆ, ದಿನಾಂಕಃ 08-02-2020 ರಲ್ಲಿ ಆದ ರಾಜೀ ಅರ್ಜಿಯಲ್ಲಿ ಸದರಿ ಚೆಕ್ ನ್ಯಾಯಾಲಯ ಬಗ್ಗೆ ಬರೆಸುತ್ತಿದ್ದರು ಅಥವಾ ಸದರಿ ಚೆಕ್‌ನ್ನು ವಾಪಾಸ್ ಪಡೆಯುತ್ತಿದ್ದರು ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

22. ನನ್ನ ಯಜಮಾನರು ಎಸ್ ಬಿ ಐ ಚೆಕ್ ನ್ನು ಮಲ್ಲೇಶಪ್ಪನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ, ಸದರಿ ಚೆಕ್ ನ್ನು ಈ ಪ್ರಕರಣದ ವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

23. ಈ ಪ್ರಕರಣದಲ್ಲಿ ನಾನು ಸಲ್ಲಿಸಿದ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನಗೆ ಸರ್ಕಾರದಿಂದ ನೀಡಿದ 25 x 30 ರ ನಿವೇಶನ ಮಾತ್ರ ಇದೆ ಎಂದು ಬರೆಸಿದ್ದೇನೆ

ಎಂದರೆ ಸರಿ. ಸದರಿ ನಿವೇಶನದಲ್ಲಿ ಶೀಟ್ ಮನೆ ನಿರ್ಮಿಸಿ, ಸದರಿ ಮನೆಯ ಮುಂಭಾಗದಲ್ಲಿ ಹಿಟ್ಟಿನ ಗಿರಣಿಯನ್ನು ಇಟ್ಟುಕೊಂಡಿದ್ದೇನೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ, ಸದರಿ ಫೋಟೋದಲ್ಲಿ ಕಾಣುವ ಶ್ರೀ ಲಕ್ಷ್ಮೀ ನಿಲಯ ನಿಮಗೆ ಸೇರಿದ್ದು ಎಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಇನ್ನೊಂದು ಫೋಟೋವನ್ನು ತೋರಿಸಲಾಗಿ, ಸದರಿ ಫೋಟೋದಲ್ಲಿ ಕಂಡು ಬರುವ 2 ಅಂತಸ್ತಿನ ಮನೆ ನಿಮಗೆ ಸೇರಿದ್ದು ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಸದರಿ 2 ಫೋಟೋಗಳನ್ನು ಕ್ರಮವಾಗಿ ನಿ.ಪಿ. 14 ಮತ್ತು 15 ಎಂದು ಗುರುತಿಸಲಾಯಿತು.

24. ರಾಧಾ ಕೋಂ ಲೇಟ್ ಕೃಷ್ಣ ಎಂದರೆ ನಾನೇ ಆಗಿರುತ್ತೇನೆ. ಸಾಕ್ಷಿಗೆ ಸರ್ವೆ ನಂ.134 ಹುಳಿನಾಗೂರು ಗ್ರಾಮದಲ್ಲಿ ಇರುವ ಜಮೀನಿನ ಆರ್.ಟಿ.ಸಿ.ಯನ್ನು ತೋರಿಸಲಾಗಿ, ಸದರಿ ಜಮೀನು ತನ್ನ ಹೆಸರಿನಲ್ಲಿ ಇದೆ ಎಂದು ಸಾಕ್ಷಿಯು ಒಪ್ಪಿಕೊಂಡಿದ್ದು, ಸದರಿ ಆರ್ ಟಿ ಸಿ ಯನ್ನು ನಿ.ಪಿ. 16 ಎಂದು ಗುರುತಿಸಲಾಯಿತು. ಸದರಿ ಸರ್ವೆ ನಂ. 134 ರ ಜಮೀನು ನನ್ನ ಯಜಮಾನರ ಜಮೀನು ಎಂದರೆ ಸರಿಯಲ್ಲ. ನನ್ನ ಯಜಮಾನರು ಮೃತಪಟ್ಟ ನಂತರ ಸದರಿ ಸರ್ವೆ ನಂ. 134 ರ ಖಾತೆ ನನ್ನ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ, ನನ್ನ ಯಜಮಾನರು ಮೃತಪಟ್ಟ ನಂತರ ನನ್ನ ಅಣ್ಣಂದಿರು ಹಣವನ್ನು ಸದರಿ ಜಮೀನಿನ ಮಾಲೀಕರಾದ ಅಜ್ಜಯ್ಯರವರಿಗೆ ಕೊಟ್ಟು ವ್ಯವಹಾರ ಮಾಡಿ, ಸದರಿ ಜಮೀನಿನ ಖಾತೆಯನ್ನು ನನ್ನ ಹೆಸರಿಗೆ ಬದಲಾಯಿಸಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸದರಿ ವ್ಯವಹಾರ ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಹಾಜರುಪಡಿಸುತ್ತೇನೆಂದು ಹೇಳಿರುತ್ತಾರೆ.

25. ಅದೇ ಸರ್ವೆ ನಂ. 134 ರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಲು ಅಜ್ಜಯ್ಯರವರಿಂದ ರೂ.5,00,000/-ಗಳನ್ನು ಪಡೆದು ಅಗ್ರಿಮೆಂಟ್ ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಂತರ ಸದರಿ ರೂ.5,00,000/-ಗಳನ್ನು ಅಜ್ಜಯ್ಯರವರಿಗೆ ವಾಪಾಸ್ ಕೊಟ್ಟು ಅಗ್ರಿಮೆಂಟನ್ನು ರದ್ದುಪಡಿಸಿಕೊಂಡಿದ್ದೀರಿ

ಎಂದರೆ ಸರಿ. ಈ ವ್ಯವಹಾರದ ಬಗ್ಗೆ ನನಗೆ ಸಂಪೂರ್ಣ ಜ್ಞಾನ ಇದೆ ಎಂದರೆ ಸರಿಯಲ್ಲ.

26. ನನ್ನ ಯಜಮಾನರಿಗೆ ಸಂಬಂಧಿಸಿದ ಆಧಾರ್ ಕಾರ್ಡ್, ವೋಟರ್ ಐ ಡಿ, ಪ್ಯಾನ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ -ಇವುಗಳು ಇದ್ದು, ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಬ್ಯಾಂಕ್ ಪಾಸ್ ಪುಸ್ತಕಗಳನ್ನು ಬ್ಯಾಂಕಿನವರು ವಾಪಾಸ್ ಪಡೆದಿದ್ದು, ಆಧಾರ್ ಕಾರ್ಡ್, ವೋಟರ್ ಐ ಡಿ, ಪ್ಯಾನ್ ಕಾರ್ಡ್ - ಇವುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾರೆ.

( ಈ ಹಂತದಲ್ಲಿ ನ್ಯಾಯಾಲಯದ ವೇಳೆ ಮುಗಿದ ಕಾರಣ ಮುಂದುವರಿದ ಪಾಟೀ ಸವಾಲನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-
(ರಾಜೇಶ್ವರಿ ಎನ್ ಹೆಗಡ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-
ಚ

<u>ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ.ಹೆಚ್.ಎಂ. ವಕೀಲರಿಂದಃ**

27. ದಿನಾಂಕಃ 08-02-2020 ರಂದು ಮಲ್ಲೇಶಪ್ಪನಿಗೂ ನನ್ನ ಯಜಮಾನರಿಗೂ ಕಡೂರು ನ್ಯಾಯಾಲಯದಲ್ಲಿ ಆದ ರಾಜೀ ಆದೇಶದ ಪ್ರಕಾರ ನನ್ನ ಯಜಮಾನರು ಮಲ್ಲೇಶಪ್ಪನಿಗೆ ಹಣ ಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ರಾಜೀ ಆದೇಶದ ಪ್ರಕಾರ ನನ್ನ ಯಜಮಾನರು ಮಲ್ಲೇಶಪ್ಪನಿಗೆ ಹಣ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣದ ಬಾಬ್ತು ನನ್ನ ಯಜಮಾನರು ಮಲ್ಲೇಶಪ್ಪನಿಗೆ ಕರ್ನಾಟಕ ಬ್ಯಾಂಕಿನ ಮತ್ತೊಂದು ಚೆಕ್ ನ್ನು ಕೊಟ್ಟರು ಎಂದರೆ ಸರಿಯಲ್ಲ. ಸದರಿ ಚೆಕ್ ಸಹಾ ನಗಧೀಕರಣಗೊಳ್ಳದೇ ಅಮಾನ್ಯವಾಗಿದೆ ಎಂದರೆ ನನಗೆ ಗೊತ್ತಿಲ್ಲ.

28. ಅದಾದ ನಂತರ ಮಲ್ಲೇಶಪ್ಪ ನನ್ನ ಯಜಮಾನರಿಗೆ ನೋಟೀಸು ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸನ್ನು ನನ್ನ ಯಜಮಾನರು ಸ್ವೀಕರಿಸಿದ ನಂತರ ಅದಕ್ಕೆ ಉತ್ತರ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇದಾದ ನಂತರ ಮಲ್ಲೇಶಪ್ಪರವರು ನನ್ನ ಯಜಮಾನರ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಕಡೂರಿನಲ್ಲಿ ಸಿ.ಸಿ.ನಂ. 37/2019 ರಂತೆ ಕೇಸು ದಾಖಲು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನ ಯಜಮಾನರಿಗೆ ಸಮನ್ಸ್ ನೀಡಿದ್ದು, ನಂತರ ವಾರೆಂಟ್ ಸಹಾ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಯಜಮಾನರು ಮೃತಪಟ್ಟಿದ್ದರಿಂದ ಸದರಿ ಸಿ.ಸಿ. 37/2019 close ಆಯಿತು ಎಂದರೆ ನನಗೆ ಗೊತ್ತಿಲ್ಲ.

29. ಸಿ.ಸಿ.37/2019 ರಲ್ಲಿ ನಿ.ಪಿ.1 ಎಂದು ಗುರುತಿಸಲಾದ ಚೆಕ್ಕಿನ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಸದರಿ ಚೆಕ್ ನನ್ನ ಯಜಮಾನರು ಕೊಟ್ಟ ಚೆಕ್ ಆಗಿರುತ್ತೆ ಎಂದು ಸೂಚಿಸಲಾಗಿ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

30. ಸಿ.ಸಿ.190/2019 ಮತ್ತು ಸಿ.ಸಿ.37/2019 -ಎರಡೂ ಪ್ರಕರಣಗಳನ್ನು ದಾಖಲಿಸುವ ಪೂರ್ವದಲ್ಲಿ ಸದರಿ ಮಲ್ಲೇಶಪ್ಪ ನನ್ನ ಯಜಮಾನರಿಗೆ ನೋಟೀಸು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸಿಗೆ ನನ್ನ ಯಜಮಾನರು ಉತ್ತರ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

31. ಮಲ್ಲೇಶಪ್ಪನ ಮೇಲೆ ಈ ಪ್ರಕರಣಕ್ಕೆ ಸಂಬಂಧಿಸಿದ ಚೆಕ್ ನ್ನು ವಾದಿಯ ಮುಖಾಂತರ ದಾವಾ ಹಾಕಿದ್ದರ ಬಗ್ಗೆ ನಾನು ಯಾವುದೇ ಫಿರ್ಯಾದಿಯನ್ನು ಕೊಡುವುದಾಗಲೀ ಅಥವಾ ಪ್ರಕರಣವನ್ನು ದಾಖಲಿಸುವುದಾಗಲೀ ಮಾಡಿಲ್ಲ. ಮಲ್ಲೇಶಪ್ಪ ನನಗೆ ಪರಿಚಯ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ಯಜಮಾನರಿಗೆ ಪರಿಚಯ ಎಂದು ಹೇಳುತ್ತಾರೆ.

32. ಮಲ್ಲೇಶಪ್ಪರವರ ಅಂಗಡಿ ಮತ್ತು ನನ್ನ ಯಜಮಾನರು ನಡೆಸುತ್ತಿದ್ದ ಅಂಗಡಿ ಅಕ್ಕ ಪಕ್ಕದಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ಯಜಮಾನರು ವಾದಿಯಿಂದ ರಾಗಿ ಖರೀದಿಸಿದ್ದರ ಬಾಬ್ತು ವಾದಿಗೆ ಈ ಪ್ರಕರಣದ ಚೆಕ್‌ನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು ಬಿಟ್ಟು ಹೋದ ಆಸ್ತಿ, ವಗೈರೆಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನನಗೆ ಈ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ಸಂಪೂರ್ಣ ಮಾಹಿತಿ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-09-01-2026
(ರಾಜೇಶ್ವರಿ ಎನ್ ಹೆಗಡ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:-
ಚ

Visit **ecourts.gov.in** for updates or download mobile app "**eCourts Services**" from Android or iOS